

# ಸೂಪರ್ 'ರಚ್ಚಿ'

ಪ್ರತಿಭೆ ಇದ್ದವರಿಗೆಲ್ಲ ಯಶಸ್ಸು ಸಿಕ್ಕುವುದಿಲ್ಲ. ಅದೃಷ್ಟ ಕೈ ಹಿಡಿದರೆ ಅವಕಾಶದ ಅಲೆ ಯಶಸ್ಸಿನ ನೆತ್ತಿಯ ಮೇಲೆ ಗುದ್ದುವಷ್ಟು ಎತ್ತರಕ್ಕೆ ಎತ್ತಿಬಿಡುತ್ತದೆ. ಇದಕ್ಕೆ ಒಳ್ಳೆಯ ಉದಾಹರಣೆ ರಚಿತಾ ರಾಮ್. ತಮ್ಮ ವೃತ್ತಿಬದುಕಿನ ಆರಂಭದಿಂದಲೂ ಸ್ಟಾರ್ ನಟರ ಜೊತೆಯಲ್ಲಿಯೇ ನಟಿಸುತ್ತ ಬಂದ ರಚಿತಾಗೆ ಸೋಲು ಗೆಲುವುಗಳ ಲೆಕ್ಕಾಚಾರ ಮೀರಿದ ಜನಪ್ರಿಯತೆ–ಅವಕಾಶ ದೊರೆತಿದೆ.

ಕನ್ನಡದಲ್ಲಿ ಗುಳಿಕೆನ್ನೆಯ ನಗುವಿನಿಂದಲೇ ಬಹುಬೇಡಿಕೆಯ ನಟಿಯಾಗಿ ಮೆರೆದ ರಚಿತಾ ಕಳೆದ ವರ್ಷವೇ ತೆಲುಗು ಅಂಗಳದಲ್ಲಿಯೂ ಹೆಜ್ಜೆ ಇಟ್ಟಿದ್ದರು. ಚಿರಂಜೀವಿ ಅವರ ಅಳಿಯ ಕಲ್ಯಾಣ್ ದೇವ್ ನಟನೆಯ 'ಪ್ರಾಪರ್ಟಿ ಬಿಲಾಂಗ್ಸ್ ಟು ಮೀನಾಕ್ಷಿ' ಸಿನಿಮಾದಲ್ಲಿ ಅವರಿಗೆ ನಟಿಸುವ ಅವಕಾಶ ಸಿಕ್ಕಿತ್ತು. ಆದರೆ ಕೊರೊನಾ ಮೆರೆದಾಟ ಶುರುವಾದ ಕಾರಣಕ್ಕೆ ಚಿತ್ರೀಕರಣ ಸ್ಥಗಿತಗೊಂಡಿತ್ತು. ಅಷ್ಟರಲ್ಲಿ ಬಹುತೇಕ ಚಿತ್ರೀಕರಣ ಮುಗಿದಿತ್ತು. ಈಗ ಬಾಕಿ ಇರುವ ಚಿತ್ರೀಕರಣ ನಡೆಸಲು ಚಿತ್ರತಂಡ ಮುಂದಾಗಿದೆ.

ಲಾಕ್‌ಡೌನ್‌ನಲ್ಲಿ ಮನೆಯಲ್ಲಿಯೇ ಕೂತಿದ್ದ ರಚಿತಾಗೆ ಹೈದರಾಬಾದ್‌ನಿಂದ ಬುಲಾವ್ ಬಂದು ಅಲ್ಲಿಗೆ ತೆರಳಿದ್ದಾರೆ. ಒಂದೆಡೆ ಕೊರೊನಾ ಕೇಸ್‌ಗಳು ಮಿತಿ ಮೀರುತ್ತಿವೆ. ಇದರ ನಡುವೆಯೇ ಸರ್ಕಾರ ಚಿತ್ರೀಕರಣಕ್ಕೆ ಅನುಮತಿ ನೀಡಿದೆ. ರಚಿತಾ ಕೂಡ ಕೊರೊನಾಗೆ ಅಂಜಿ ಮನೆಯಲ್ಲಿ ಕೂತಿಲ್ಲ. 'ಕಾಯಕವೇ ಕೈಲಾಸ' ಎಂದುಕೊಂಡು ಹೈದರಾಬಾದ್‌ಗೆ ಜಿಗಿದಿದ್ದಾರೆ.

'ಪ್ರಾಪರ್ಟಿ ಬಿಲಾಂಗ್ಸ್ ಟು ಮೀನಾಕ್ಷಿ' ಚಿತ್ರಕ್ಕೆ, ಪುಲಿ ವಾಸು ಆ್ಯಕ್ಷನ್ ಕಟ್ ಹೇಳಿದ್ದಾರೆ. ರೇಬಾ ಚಕ್ರವರ್ತಿ ಈ ಚಿತ್ರದ ನಾಯಕಿ. ಹಾಗಾದರೆ ರಚಿತಾ ಪಾತ್ರವೇನು? ಅವಳು ಯಾವ ಲುಕ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಕನ್ನಡದ ರಚ್ಚು ತೆಲುಗಿನಲ್ಲಿನೂ ಅಚ್ಚುಮೆಚ್ಚಾಗಲಿದ್ದಾರೆ ಎಂಬ ಪ್ರಶ್ನೆಗಳಿಗೆಲ್ಲ ಉತ್ತರ ಸಿಗಲು ತುಸು ಕಾಯಲೇಬೇಕು.



# ವಿಂಡೊ ಸೀಟ್‌ನಲ್ಲಿ ಶೀತಲ್!

ಸುದ್ದಿ ನಿರೂಪಕಿಯಾಗಿ ಮನೆಮನೆಗೆ ಪರಿಚಿತರಾದ ಶೀತಲ್ ಶೆಟ್ಟಿ ನಂತರ 'ಉಳಿದವರು ಕಂಡಂತೆ' ಸಿನಿಮಾ ಮೂಲಕ ನಟನೆಗೂ ಇಳಿದರು. 'ಬಿಗ್ ಬಾಸ್' ರಿಯಾಲಿಟಿ ಶೋದಲ್ಲಿಯೂ ಪಾಲ್ಗೊಂಡ ಶೀತಲ್ ನಿರ್ದೇಶಕಿಯಾಗಿಯೂ ಅವತಾರ ಎತ್ತಿದ್ದಾರೆ.

ಶೀತಲ್ ನಿರ್ದೇಶನಕ್ಕಿಳಿದಿರುವ ಸುದ್ದಿ ಹೊಸದೇನಲ್ಲ. 'ಕಾರು' ಎಂಬ ಕಿರುಚಿತ್ರವನ್ನು ನಿರ್ದೇಶಿಸಿದ್ದು ಸುದ್ದಿಯಾಗಿತ್ತು. ಬಹುಶಃ ಪೂರ್ಣ ಪ್ರಮಾಣದ ನಿರ್ದೇಶಕಿಯಾಗುವ ಸಿದ್ಧತೆ ಇರಬಹುದು ಎಂದು ಲೆಕ್ಕ ಹಾಕುತ್ತಿರುವಾಗಲೇ ಅವರು ಪೂರ್ಣಪ್ರಮಾಣದ ಸಿನಿಮಾವೊಂದನ್ನು ನಿರ್ದೇಶಿಸಿರುವ ಸುದ್ದಿ ಹೊರಬಿದ್ದಿದೆ. ಎಷ್ಟೆಂದರೂ ಸುದ್ದಿವಾಹಿನಿಯಲ್ಲಿ ಬ್ರೇಕಿಂಗ್ ನ್ಯೂಸ್ ಕೊಟ್ಟ ಅಭ್ಯಾಸವಲ್ಲವೇ? ತಮ್ಮ ಚಿತ್ರದ ಸುದ್ದಿಯನ್ನು ಬ್ರೇಕ್ ಮಾಡದೇ ಇಟ್ಟುಕೊಂಡಿದ್ದ ಶೀತಲ್ ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ವಿಷಯ ಸ್ಫೋಟಿಸಿದ್ದಾರೆ.

'ವಿಂಡೊ ಸೀಟ್' ಎಂಬುದು ಅವರು ನಿರ್ದೇಶಿಸಲಿರುವ ಸಿನಿಮಾದ ಹೆಸರು. ಪಾತ್ರ ವರ್ಗದ ಆಯ್ಕೆ ಆಗಿದೆಯಾ? ಶೂಟಿಂಗ್ ಯಾವಾಗ? ಎಂದೆಲ್ಲ ಪ್ರಶ್ನೆಗಳನ್ನು ಕೇಳುವ ಹಾಗೆಯೇ ಇಲ್ಲ. ಎಲ್ಲರೂ ಕೊರೊನಾ ಲಾಕ್‌ಡೌನ್ ಕಾರಣದಿಂದ ಶೂಟಿಂಗ್ ಮಾಡಲಾಗುತ್ತಿಲ್ಲ ಎಂದು ಪರದಾಡುತ್ತಿದ್ದರೆ, ಶೀತಲ್ ಮಾತ್ರ ಆರಾಮವಾಗಿ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ತನ್ಮಯರಾಗಿದ್ದಾರೆ. 'ವಿಂಡೊ ಸೀಟ್' ಚಿತ್ರದ ಚಿತ್ರೀಕರಣ ಜನವರಿಯಲ್ಲಿಯೇ ಮುಗಿದಿದೆಯಂತೆ!

ಅಂದಹಾಗೆ, ನಿರೂಪ್ ಭಂಡಾರಿ ಈ ಸಿನಿಮಾದ ಹೀರೊ. ಅಮೃತಾ ಅಯ್ಯಂಗಾರ್ ಮತ್ತು ಸಂಜನಾ ಆನಂದ್ ಇಬ್ಬರು ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ. ಅರ್ಜುನ್ ಜನ್ಯ ಸಂಗೀತ ಡಮರುಗದ ಬೆಂಬಲವೂ ಅವರಿಗೆ ಸಿಕ್ಕಿದೆ. ಇದೊಂದು ರೊಮ್ಯಾಂಟಿಕ್ ಥ್ರಿಲ್ಲರ್ ಕಥೆ ಎನ್ನುವುದು ಶೀತಲ್ ಅಂಬೋಣ. ಐದು ವರ್ಷಗಳ ಹಿಂದೆಯೇ ಇದರ ಕಥೆಯನ್ನು ಬರೆದಿದ್ದರಂತೆ. ಅದನ್ನು ತೆರೆಯ ಮೇಲೆ ಕಾಣಿಸುವ ಅವಕಾಶ ಈಗ ಸಿಕ್ಕಿದೆ. ಅದಕ್ಕಾಗಿ ಅವರು ಪ್ರೈಮ್ ಟೈಮ್ ಸುದ್ದಿಗೆ ಕಾಯುವ ಹಾಗೆಯೇ ಕಾಯುತ್ತಿದ್ದಾರೆ.